# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ-155<br>Volume-155 | ಬೆಂಗಳೂರು, ಗುರುವಾರ ,೧೧, ಜೂನ್, 2020(ಜ್ಯೇಷ್ಠ ,21, ಶಕವರ್ಷ ೧೯೪2)<br>Bengaluru, THURSDAY, 11, JUNE, 2020( JYAISTHA ,21, ShakaVarsha 1942) | ಸಂಚಿಕೆ -24<br>Issue - 24 |
|---|---|---|

## ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅಧಿಸೂಚನೆ

ಸಂಖ್ಯೆ:ಗ್ರಾಅಪಂರಾ 87 ಜಿಪಸ 2020, ಬೆಂಗಳೂರು, ದಿನಾಂಕ:06-06-2020

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ14)ರ ಪ್ರಕರಣ 138ರೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್(ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು, 2005ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕರಡು ತಿದ್ದುಪಡಿ ನಿಯಮಗಳನ್ನು ಸದರಿ ಅಧಿನಿಯಮದ 311ನೇ ಪ್ರಕರಣದ ಉಪಪ್ರಕರಣ (1)ರಡಿಯಲ್ಲಿ ಅಗತ್ಯಪಡಿಸಲಾದಂತೆ ದಿನಾಂಕ:14-05-2020ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-೪ಎ ನಂ.PR154ರಲ್ಲಿ ಅಧಿಸೂಚನೆ

ಸಂಖ್ಯೆ: ಗ್ರಾಅಪಂರಾ 87 ಜಿಪಸ 2020 ದಿನಾಂಕ:14-05-2020ರ ಮೂಲಕ ಪ್ರಕಟಿಸಿದ್ದು, ಅದರಿಂದ ಬಾಧಿತರಾಗಬಹುದಾದ ಸಂಭವ ಇರುವ ವ್ಯಕ್ತಿಗಳಿಂದ 15 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:14-05-2020ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

15ದಿನಗಳ ಅವಧಿಯಲ್ಲಿ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತಿಯಾಗದೇ ಇರುವುದರಿಂದ,

ಈಗ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ14)ರ ಪ್ರಕರಣ 138ರೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್(ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು, 2005ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡ ತಿದ್ದುಪಡಿ ನಿಯಮಗಳನ್ನು ರಚಿಸುತ್ತದೆ, ಎಂದರೆ ;-

ನಿಯಮಗಳು

1. **ಹೆಸರು ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

   (2)ಇವು ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ನಿಯಮ 3ಕ್ಕೆ ತಿದ್ದುಪಡಿ:**-ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) ನಿಯಮಗಳು, 2005ರ (ಇಲ್ಲಿ ಇನ್ನು ಮುಂದೆ ಮೂಲ ನಿಯಮಗಳೆಂದು ಉಲ್ಲೇಖಿತವಾಗಿದೆ), ನಿಯಮ 3ರ ಉಪನಿಯಮ (1)ರಲ್ಲಿ ಕೋಷ್ಟಕದ ಬದಲಿಗೆ ಈ ಕೆಳಗಿನಂತೆ ಪ್ರತ್ಯಾಯೋಜಿಸತಕ್ಕದ್ದು. ಅಂದರೆ:-

"ಕೋಷ್ಟಕ

| ಕ್ರ. ಸಂ. | ಪ್ರವರ್ಗ | ಅಧ್ಯಕ್ಷರು | | ಉಪಾಧ್ಯಕ್ಷರು | |
|---|---|---|---|---|---|
| | | ಒಟ್ಟು | ಮಹಿಳೆಯರು | ಒಟ್ಟು | ಮಹಿಳೆಯರು |
| 1 | ಅನುಸೂಚಿತ ಜಾತಿ | 45 | 23 | 45 | 23 |
| 2 | ಅನುಸೂಚಿತ ಪಂಗಡ | 21 | 10 | 21 | 10 |
| 3 | ಹಿಂದುಳಿದ ವರ್ಗಗಳು ಪ್ರವರ್ಗ-ಎ | 38 | 19 | 38 | 19 |
| | ಪ್ರವರ್ಗ-ಬಿ | 9 | 5 | 9 | 5 |
| 4 | ಮೀಸಲಿಡದ ಸಾಮಾನ್ಯ ವರ್ಗ | 113 | 56 | 113 | 56 |
| | ಒಟ್ಟು | 226 | 113 | 226 | 113 |

3. **ಪದಾವಳಿಗಳ ಪ್ರತಿಯೋಜನೆ.**-ಮೂಲ ನಿಯಮಗಳಲ್ಲಿ, ಪೀಠಿಕೆ, ನಿಯಮ 1 ಮತ್ತು 2ರಲ್ಲಿ ಕಂಡು ಬರುವ "ಪಂಚಾಯತ್ ರಾಜ್" ಎಂಬ ಪದಾವಳಿಗಳ ಬದಲಿಗೆ "ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್" ಎಂಬ ಪದಾವಳಿಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

PR-182